ಸರ್ಟಿಫಿಕೇಟ್ ಕೊಟ್ಟಿಗುತ್ತಾರೆ. ಯೂನಿವರ್ಸಿಟಿ ಗ್ರಾಂಟ್ ಕಮಿಷನ್‌ನವರು ಇದಕ್ಕೆ ಎರಡು ಲಕ್ಷ ರೂಪಾಯಿ ಗ್ರಾಂಟನ್ನು ರಿಲೀಸ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರ ಇದಕ್ಕೆ ಮ್ಯಾಚಿಂಗ್ ಗ್ರಾಂಟನ್ನು ಬಿಡುಗಡೆ ಮಾಡಿಲ್ಲ. ತಕ್ಷಣ ಸರ್ಕಾರದವರು ಎರಡು ಲಕ್ಷ ರೂಪಾಯಿ ಮ್ಯಾಚಿಂಗ್ ಗ್ರಾಂಟನ್ನು ತಕ್ಷಣ ಇದಕ್ಕೆ ಬಿಡುಗಡೆ ಮಾಡಬೇಕು. ಮತ್ತು ಕಾಲೇಜಿಗೆ ಸುವ್ಯವಸ್ಥಿತವಾದ ಕಟ್ಟಡ ಬರುವುದಕ್ಕೆ ಅನುಕೂಲ ಮಾಡಿಕೊಡಬೇಕು. ಜೊತೆಗೆ ಲ್ಯಾಬೊರೇಟರಿ, ವಾಚನಾಲಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ವಿದ್ಯಾರ್ಥಿಗಳು ನನಗೆ ಫೆರಾಪೋ ಮಾಡುವುದಕ್ಕೆ ಬಂದಿದ್ದರು. ನಾನು ವಿದ್ಯಾಮಂತ್ರಿಗಳು ಬಹಳ ಒಳ್ಳೆಯವರು, ಅವರು ನಮ್ಮ ತಾಲ್ಲೂಕಿನ ಆಳಿಯಂದಿರು, ಮಾಡಿಸಿಕೊಡುತ್ತಾರೆ ಎಂದು ಭರವಸೆ ಕೊಟ್ಟಿದ್ದೇನೆ. ಆದಂದರಿಂದ ಮಾನ್ಯ ವಿದ್ಯಾಮಂತ್ರಿಗಳು ಶ್ರದ್ಧೆ ವಹಿಸಿ, ಕಾಲೇಜಿನ ಅನಾನುಕೂಲತೆಗಳನ್ನು ಸರಿಪಡಿಸಬೇಕು. ಈ ಬಗ್ಗೆ ನಿರ್ದಿಷ್ಟವಾದ ಭರವಸೆ ಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಯಾವುದಾದರೂ ತಾಲ್ಲೂಕಿಗೆ ಒಳ್ಳೆಯದಾಗಬೇಕೆಂದರೆ, ಆ ತಾಲ್ಲೂಕಿನವರು ಮಂತ್ರಿಗಳ ಬೀಗತನ ಮಾಡಬೇಕು.

ಶ್ರೀ ಎಂ, ಚಂದ್ರಶೇಖರ್ (ವಿದ್ಯಾಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಅಲ್ಲಿ ಉಪನ್ಯಾಸಕರು ಇಲ್ಲ ಎಂದು ಹೇಳಿದ್ದಾರೆ, ತಾತ್ಕಾಲಿಕವಾಗಿ ಪಾರ್ಟ್‌ಟೈಮ್ ಆಧಾರದ ಮೇಲೆ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಈಗಾಗಲೇ ಸೂಚನೆ ನೀಡಲಾಗಿದೆ. ಮೇಲ್ಮನೆಯಲ್ಲೂ ಕೂಡಾ ಈ ಬಗ್ಗೆ ಅಲ್ಲಿನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ, ಯು.ಜಿ.ಸಿ. ಯವರು ಈ ಕಾಲೇಜಿಗೆ ಎರಡು ಲಕ್ಷ ರೂಪಾಯಿಗಳ ಗ್ರಾಂಟ್ ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದರು. ಅದಕ್ಕೆ ಎರಡು ಲಕ್ಷ ರೂಪಾಯಿಗಳ ಮ್ಯಾಚಿಂಗ್‌ಗ್ರಾಂಟನ್ನು ಸರ್ಕಾರ ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಆಗಲೇ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಲ್ಯಾಬೊರೇಟರಿ ಗೋಸ್ಕರ ಈಗಾಗಲೇ ೬೮ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಕೆಲಸ ಕೂಡಾ ಆಗಿದೆ. ಮಿಕ್ಕ ವಿಚಾರಗಳಲ್ಲಿ ಇದು ಮುನಿಸಿಪಲ್ ಬಿಲ್ಡಿಂಗ್ ಆಗಿದ್ದು, ಮುನಿಸಿಪಾಲಿಟಿಯವರು ಇದನ್ನು ಮಾಡಬೇಕಾಗಿತ್ತು. ಆವರ ಕೈಯಲ್ಲಿ ಆಗಂವುದಿಲ್ಲ. ಎಂದು ಸರ್ಕಾರ ತೆಗೆದುಕೊಂಡಿದ್ದು ಈಗ ಸರ್ಕಾರ ಪುನಃ ಮುನಿಸಿಪಾಲಿಟಿಗೆ ಟ್ರಾನ್ಸ್‌ಫರ್ ಮಾಡುತ್ತಿದೆ. ಮುನಿಸಿಪಾಲಿಟಿಯಿಂದ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹಿಂದೆಯೇ ಇದನ್ನು ತೆಗೆದುಕೊಂಡ ಕಾರಣ ಎಲ್ಲಾ ಕೆಲಸಗಳನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತೇನೆ.

Inordinate delay in setting up of a thermal plant in D.K. District

† Sri M. Blasius D'Souza. Sir, I call the attention of the Honble Minister for Large and Medium Industries and Power regarding inordinate delay of setting up of a Thermal Plant at Dakshina Kannada District.

Sri P.G.R. Sindhia.—(Minister for Social Welfare) (On behalf of Minister for Large and Medium Industries and Power).—Sir. I wish to make the following statement.

It is proposed to set up a multifuel Thermal Power Station at Nandikur near Mangalore with an initial installed capacity in the first stage of 2×210 MW. The feasibility report with an estimated cost of Rs 614.24 Crores has been submitted to Central Electricity Authority (CEA) in April 1987. The revised estimate amounting to Rs. 621.4 crores inclusive of the cost of Mulki Dam has been submitted to CEA in August 1988. The feasibility report has been discussed and its techno-economic apprisal was found to be in order.

CEA have intimated that the scheme would be accorded clearance subject to fulfillment of certain conditions such as clearnce from environment and forest angle, civil aviation department, arrangement for construction of Mulki Dam, finalisation of logistics for transortation of coal from Talchar to Project site, compliance to section 29 (2) of the Electricity Supply Act 1948, etc.

The above clearances are being pursued with the various departments of the state and central Governments. The various sources of funding to this project such as investment from Non-resident Indians (NPIS), participation by any foreign agency either in part for supply of equipment and capital loan or taking up the project on turn key basis etc. are being explored. However, this project has not been included under 7th Plan and the question of inordinate delay in setting up this project does not arise.

SRI M. BIASIUS D'SOUZA.—Mr, Speaker. I would like to know from the Hon'ble Minister when will this plant come into existence and when the Government is going to take steps to acquire the land at the same time I have got a request to make that in proper compensation should be paid for land acquired for this project ?

SRI P. G. R. SINDHIA.—The question of setting up of this project does not arise because this has not been included in the 7th plan. It will be included in the 8th plan. As far as acquisition of land and compensation are concerned, once the project is cleared then all these things will be examined and due compensation will be paid as per rules.

ಅಧ್ಯಕ್ಷರು.—ಈಗ ನಿಯಮ ೩೩ಳಿ ಅನ್ನು ತೆಗೆದುಕೊಳ್ಳೋಣ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಗಂಟೆ ೭-೩೦ ಆಯಿತು. ತಾವು ಸಸಗೆ ನಾಲ್ಕು ಸಾರಿ ಪ್ರಾಮಿಸ್ ಮಾಡಿದ್ದೀರಿ. ದಯಮಾಡಿ ತಾವು ಈಗ ಆ ಬಿಲ್ ತೆಗೆದು ಕೊಳ್ಳಲೇಬೇಕು. ಆ ಬಿಲ್‌ನಿಂದ ಸುಮಾರು ೧೦ ಲಕ್ಷ ಬಡವರಿಗೆ ಅನುಕೂಲವಾಗುತ್ತದೆ. ದಯಮಾಡಿ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ತಾವು ಹೇಳಲೇಬೇಕು. ಇಲ್ಲದಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ಸದನದ ಬೆಲ್‌ಗೆ ಬಂದು ಕುಳಿತು ಕೊಂಡರು)

ಶ್ರೀ ಬಿ. ಎಸ್. ಯೂಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕಳೆದ ನಾಲ್ಕೈದು ವರ್ಷಗಳಿಂದಲೂ ಈ ಬಿಲ್ ಮಂಡಿಸುತ್ತೇವೆಂದು ಹೇಳುತ್ತಿದ್ದಾರೆ. ಇದುವರೆವಿಗೂ ಮಂಡಿಸಲಿಲ್ಲ. ಇದರ ಹಿಂದೆ ಏನಿದೆ ? ದಯಮಾಡಿ ತಾವು ಸರ್ಕಾರಕ್ಕೆ ಹೇಳಿ...

(ಗೊಂದಲ)

ಅಧ್ಯಕ್ಷರು.—ಈಗ ನಿಯಮ ೩೩ಳಿ ಆಗಲಿ, ಆ ಮೇಲೆ ನೋಡೋಣ.